572 ಶ್ರೀ ಸುಭಾಷ್ ಜೋಷಿ (ನಿಪ್ಪಾಣಿ) :– ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಜಿಲ್ಲಾವಾರು ಮಟ್ಟದಲ್ಲಿ ಕಾರ್ಮಿಕ ನ್ಯಾಯಾಲಯಗಳನ್ನು ಸ್ಥಾಪಿಸುವ ಬಗ್ಗೆ ಯೋಚಿಸುತ್ತಿದೆಯೇ?

ಆ) ಹಾಗಿದ್ದಲ್ಲಿ, ಯಾವಾಗ ಸ್ಥಾಪಿಸಲಾಗುವುದು?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ಮಂತ್ರಿಯವರು):–

ಅ) ಪ್ರತಿ ಜಿಲ್ಲೆಯಲ್ಲಿ ಒಂದು ಕಾರ್ಮಿಕ ನ್ಯಾಯಾಲಯವನ್ನು ಸ್ಥಾಪಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಆ) ಪರಿಶೀಲಿಸಿ ತೀರ್ಮಾನಿಸಲಾಗುವುದು.

ಮಾಗಡಿ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸುವ ಬಗ್ಗೆ

635 ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನಲ್ಲಿ ಸಕಾಲಕ್ಕೆ ಸರಿಯಾಗಿ ಮಳೆ ಬಾರದೆ ರೈತರಿಗೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಈ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಲಾಗುವುದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):–

ಅ) ಹೌದು.

ಆ) ಅಂತಹ ಪರಸ್ಥಿತಿ ಉಂಟಾಗಿರುವುದಿಲ್ಲ.

ಜಿಲ್ಲಾವಾರು ಬರಗಾಲ ಕಾಮಗಾರಿಗಳಿಗಾಗಿ ಹಣ ಖರ್ಚು ಮಾಡಿದ ಬಗ್ಗೆ

504. ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಾವ ಯಾವ ಜಿಲ್ಲೆಗೆ ಬರಗಾಲ ಕಾಮಗಾರಿಗಳ ಸಲುವಾಗಿ ಎಷ್ಟು ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ. (ಜಿಲ್ಲಾವಾರು ವಿವರ ಕೊಡಿರಿ)

ಆ) ಆ ಹಣವನ್ನು ಎಂದು ಬಿಡುಗಡೆ ಮಾಡಲಾಯಿತು?

ಇ) ತಾ. 15–10–90ರವರೆಗೆ ಖರ್ಚಾದ ಮೊತ್ತವೆಷ್ಟು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):–

ಅ) ಅನುಬಂಧದಲ್ಲಿ ನೀಡಿದೆ.

ಆ) 24–4–90, 14–5–90, 2–6–90, 15–6–90, 29–6–90, 2–7–90, 11–7–90, 18–7–90, 16–8–90, 20–8–90, 3–9–90, 7–9–90, 15–9–90, 21–9–90, 27–9–90, 5–10–90, 8–10–90, 11–10–90, 22–10–90, 8–11–90, 9–11–90, 26–11–90.

ಇ) ರೂ. 301.17 ಲಕ್ಷ.

ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ತಾ. 1–4–90 ರಿಂದ 27–11–90ರವರೆಗೆ ಜಿಲ್ಲಾವಾರು ಬಿಡುಗಡೆ ಮಾಡಿರುವ ಮೊತ್ತವನ್ನು ತೋರಿಸುವ ವಿವರಣಾ ಪಟ್ಟಿ

(ಬರ ಪರಿಹಾರಕ್ಕಾಗಿ) (ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಕುಡಿಯುವ ನೀರಿನ ಪೂರೈಕೆ	ಮೇವು ಸಾಗಾಣಿಕೆಗೆ	ಕೃಷಿಚೇಲ ಗಳ ವಿತರಣೆಗೆ	ವಿಶೇಷ ಪೌಷ್ಟಿಕ ಆಹಾರ ಕಾರ್ಯಕ್ರಮಕ್ಕೆ	ಉದ್ಯೋಗ ಸೃಜನೆಗೆ	ಒಟ್ಟು
1	2	3	4	5	6	7	8
1.	ಬೆಂಗಳೂರು (ನಗರ)	10.00	–	–	–	–	10.00
2.	ಬೆಂಗಳೂರು (ಗ್ರಾ)	12.00	–	–	–	13.00	25.00
3.	ಕೋಲಾರ	50.00	2.00	–	–	80.00	132.00
4.	ತುಮಕೂರು	38.50	2.00	–	–	73.00	113.50
5.	ಚಿತ್ರದುರ್ಗ	24.00	2.00	–	–	54.00	80.00
6.	ಶಿವಮೊಗ್ಗ	3.00	–	–	–	45.00	48.00
7.	ಮೈಸೂರು	30.50	5.00	2.00	1.00	90.00	128.50
8.	ಮಂಡ್ಯ	27.00	3.00	1.00	1.00	67.00	99.00
9.	ಚಿಕ್ಕಮಗಳೂರು	13.00	3.00	–	–	24.00	40.00
10.	ಹಾಸನ	34.00	5.00	2.00	1.00	75.00	117.00
11.	ಕೊಡಗು	5.00	–	–	–	–	5.00

1	2	3	4	5	6	7	8
12.	ದಕ್ಷಿಣ ಕನ್ನಡ	6.00	–	–	–	–	6.00
13.	ಗುಲ್ಬರ್ಗ	31.00	–	3.00	–	–	34.00
14.	ಬೀದರ್	8.00	–	–	–	–	8.00
15.	ರಾಯಚೂರು	14.00	–	–	–	30.00	44.00
16.	ಬಳ್ಳಾರಿ	14.00	–	–	–	28.00	42.00
17.	ಬೆಳಗಾಂ	29.00	–	–	–	10.00	39.00
18..	ಬಿಜಾಪುರ	33.00	–	–	–	38.00	71.00
19.	ಧಾರವಾಡ	82.00	–	3.00	–	72.00	157.00
20.	ಉತ್ತರ ಕನ್ನಡ	–	–	–	–	–	–
		464.00	**22.00**	**11.00**	**3.00**	**699.00**	**1199.00**